



ದಿನಾಂಕ:17-04-2024 ರಂದು ಸಭಾಪತಿ ಬಸವರಾಜ ಹೊರಟ್ಟಿ ಅವರು ತಮ್ಮ ಬೆಂಗಳೂರಿನ ಕಾರ್ಯಾಲಯದಲ್ಲಿ ಕನ್ನಡದಲ್ಲಿ ಯು.ಪಿ. ಎಸ್ .ಸಿ ಪರೀಕ್ಷೆ ಬರೆದು ಪಾಸಾದ ಶಾಂತಪ್ಪ ಕುರುಬರ ಅವರನ್ನ ಸನ್ಮಾನಿಸಿ ಮಾತನಾಡಿದ ಅವರು ಶಾಂತಪ್ಪ ಅವರು ವಿದ್ಯಾರ್ಥಿ ಜೀವನದಲ್ಲಿ ಸಾಕಷ್ಟು ಏಳು ಬೀಳುಗಳನ್ನು ಕಂಡು ಎಸ್. ಎಸ್. ಎಲ್. ಸಿ ಹಾಗೂ ಪಿ.ಯು.ಸಿಯಲ್ಲಿ ಫೇಲಾದರೂ ನಿರಂತರ ಪರಿಶ್ರಮದಿಂದ ಅತ್ಯುನ್ನತ ಮಟ್ಟದ ಪರೀಕ್ಷೆಯಾದ ಯು. ಪಿ. ಎಸ್. ಸಿ ಪರೀಕ್ಷೆಯನ್ನು ಛಲ ಬಿಡದೆ ಬರೆದು ಪಾಸಾಗುವ ಮೂಲಕ ಲಕ್ಷಾಂತರ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದ್ದಾರೆ. ಹಿಂದುಳಿದ ಕಲ್ಯಾಣ ಕರ್ನಾಟಕದಿಂದ ಬಂದ ಶಾಂತಪ್ಪ ಕುರುಬರವರು ಆ ಭಾಗದ ಹೆಮ್ಮೆಯ ಪುತ್ರರಾಗದೆ ಇಡೀ ಕರ್ನಾಟಕದ ಕೀರ್ತಿ ಹೆಚ್ಚಿಸಿ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಭರವಸೆ ಕಳೆದುಕೊಂಡ, ಕಳೆದುಕೊಳ್ಳುತ್ತಿರುವ ವಿದ್ಯಾರ್ಥಿಗಳಿಗೆ ಶಾಂತಪ್ಪ ಕುರುಬರವರ ಸಾಧನೆಯ ಹಾದಿ ಅವರ ಜೀವನ ವಿದ್ಯಾರ್ಥಿಗಳಿಗೆ ಅತ್ಯುನ್ನತ ಪಾಠ ಹಾಗೂ ಮಾದರಿ ಎಂದು ಬಸವರಾಜ್ ಹೊರಟ್ಟಿ ಅವರು ತಮ್ಮ ಅಂತರಾಳದ ಮಾತುಗಳನ್ನು ಆಡುವ ಮೂಲಕ ಶಾಂತಪ್ಪ ಕುರುಬರವರಿಗೆ ಶುಭ ಕೋರಿದರು.

ಇದೇ ಸಂದರ್ಭದಲ್ಲಿ ರಾಜ್ಯದ ವಿದ್ಯಾರ್ಥಿಗಳಿಗೆ, ಯುವಕರಿಗೆ ಕಿವಿ ಮಾತನ್ನು ಹೇಳಿದ ಹೊರಟ್ಟಿ ಅವರು ತಮ್ಮ ತಮ್ಮ ಜೀವನದ ಭರವಸೆಗಳು ಬತ್ತದಂತೆ ನೋಡಿಕೊಳ್ಳಿ, ಕನಸು ಕಾಣಲು ದುಡ್ಡು ಖರ್ಚು ಮಾಡಬೇಕಾಗಿಲ್ಲ, ಒಂದಿಷ್ಟು ಶ್ರಮ ಹಾಕಿದ್ರೆ ಸಾಕು. ನಿರಂತರ ಪ್ರಯತ್ನ ಇಡೀ ತಮ್ಮ ಬದುಕನ್ನ ಹಸನಗೊಳಿಸುತ್ತದೆ ಆ ನಿಟ್ಟಿನತ್ತ ಪ್ರತಿಯೊಬ್ಬ ಯುವಕರು ಸಾಗಲಿ ನಿಮಗೂ ಕೂಡ ಶಾಂತಪ್ಪ ಕುರುಬರಂತೆ ಯಶಸ್ಸು ಖಂಡಿತವಾಗಿ ಸಿಗುತ್ತದೆ ಎಂದು ಸಭಾಪತಿ ಬಸವರಾಜ್ ಹೊರಟ್ಟಿ ಅವರು ಹೇಳಿದರು.

ಈ ಸಂದರ್ಭದಲ್ಲಿ ಸಭಾಪತಿಯವರ ವಿಶೇಷ ಕರ್ತವ್ಯ ಅಧಿಕಾರಿ ಡಾ. ಮಹೇಶ್ ವಾಳ್ವೇಕರ್ ಸೇರಿದಂತೆ ಪರಿಷತ್ತಿನ ವಿವಿಧ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

********